#ಯುನೈಟೆಡ್ ಬೆಂಗಳೂರು

ಗೆ,

ದಿನಾಂಕ–06–06–2019

ಅಪರ ನಿಬಂಧಕರು, ವಿಚಾರಣೆಗಳು–1
ಮಾನ್ಯ ಲೋಕಾಯುಕ್ತ ಕಛೇರಿ
ಎಂ.ಎಸ್.ಬಿಲ್ಡಿಂಗ್, ಡಾ. ಬಿ.ಆರ್ ಅಂಬೇಡ್ಕರ್ ವೀದಿ, ಬೆಂಗಳೂರು–560001

ಮಾನ್ಯರೇ,

ವಿಷಯ : **ವಿಭೂತಿಪುರ ಕೆರೆ**ಯ ಬಗ್ಗೆ ಸ್ಥಿತಿಗತಿ ವರದಿ ಸಲ್ಲಿಕೆ
ಉಲ್ಲೇಖ : ಮಾನ್ಯ ಲೋಕಾಯುಕ್ತರ ಆದೇಶ ಸಂಖ್ಯೆ Comp/Lok/BCD-2525/2018.

**ಕಂದಾಯ ಇಲಾಖಾ ದಾಖಲೆಗಳ ಪ್ರಕಾರ ವಿಭೂತಿಪುರ ಕೆರೆಯು ಬೆಂಗಳೂರು ಪೂರ್ವ ತಾಲ್ಲೂಕು, ಮಾರತ್ತಹಳ್ಳಿ ಹೋಬಳಿ, ವಿಭೂತಿಪುರ ಸರ್ವೇ ನಂ 175 ರಲ್ಲಿ ಒಟ್ಟು 45 ಎಕರೆ 18 ಗುಂಟೆ ವಿಸ್ತೀರ್ಣವನ್ನು ಹೊಂದಿದೆ.**

ಈ ಕೆರೆಯಲ್ಲಿ ಕೆಲವು ಸಮಸ್ಯೆಗಳಿದ್ದು, ಅವುಗಳನ್ನು ಈ ಕೆಳಗಿನಂತೆ ತಿಳಿಸಲಾಗಿದೆ.

1. ಈ ಕೆರೆಯು ಕೋಳಿವಾಡ ಸಮಿತಿಯ ವರದಿ ಮತ್ತು ಕಂದಾಯ ದಾಖಲೆಗಳ ಪ್ರಕಾರ ಒಟ್ಟು 3 ಎಕರೆ 13 ಗುಂಟೆ ಒತ್ತುವರಿಯಾಗಿದೆ.
2. ಮಾನ್ಯ ಲೋಕಾಯುಕ್ತರ (Comp/Lok/BCD-2525/2018-ದಿನಾಂಕ 12–02–2019) ಆದೇಶದಂತೆ ವಿಭೂತಿಪುರ ಕೆರೆ ಸರ್ವೇ ಮಾಡಲು 8 ವಾರಗಳ ಗಡುವನ್ನು ನೀಡಲಾಗಿದ್ದು, ಇನ್ನು ಈ ಕೆರೆಯ ಸಮೀಕ್ಷೆ ಆಗಿರುವುದಿಲ್ಲ. ಹಾಗಾಗಿ ಈ ಕೆರೆಯನ್ನು ಸರ್ವೇ ಶೀಘ್ರ ಮಾಡಿ ಒತ್ತುವರಿ ತೆರವುಗೊಳಿಸಬೇಕಿದೆ.
3. ಈ ಕೆರೆಗೆ ಕಸವನ್ನು ಸುರಿಯಲಾಗುತ್ತಿದ್ದು, ಇದನ್ನು ತಡೆಗಟ್ಟಬೇಕಿದೆ.
4. ಈ ಕೆರೆಗೆ ಕೊಳಚೆ ನೀರು ಮಳೆಕಾಲುವೆ ಮೂಲಕ ಹರಿದು ಬರುತ್ತಿದ್ದು, ಇದನ್ನು ತಡೆಗಟ್ಟಬೇಕಿದೆ.
5. ಈ ಕೆರೆಯ ಸುತ್ತಮುತ್ತಲ ಪ್ರದೇಶಗಳಿಂದ ಕೊಳಚೆ ನೀರು ಹರಿದು ಕೆರೆ ಸಂಪೂರ್ಣ ಕಲುಷಿತಗೊಂಡಿದೆ. ಉದಾ: ಕೆಂಪಣ್ಣ ರಸ್ತೆಯ ಕಡೆಯಲ್ಲಿ ಮತ್ತು ಅಪ್ಪಾಸ ಕಛೇರಿಯ ಬಳಿ ಯು.ಜಿ.ಡಿ ನೀರು ಸೋರಿಕೆಯಾಗುತ್ತಿದೆ, ಕೊಳಚೆನೀರು ಕೆರೆಗೆ ಹರಿಯುವುದನ್ನು ತಡೆಗಟ್ಟಬೇಕಿದೆ.

ಈ ಮೇಲಿನ ಸಮಸ್ಯೆಗಳನ್ನು ಶೀಘ್ರ ಪರಿಹರಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಾವು ಆದೇಶ ನೀಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಧನ್ಯವಾದಗಳೊಂದಿಗೆ,

ಇಂತಿ ತಮ್ಮ ವಿಶ್ವಾಸಿ

ಎನ್ ಆರ್ ಸುರೇಶ್, ಸಂಚಾಲಕರು, ಯುನೈಟೆಡ್ ಬೆಂಗಳೂರು